ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ	: 673 (695)
ಮಾನ್ಯ ಸದಸ್ಯರ ಹೆಸರು	: ಶ್ರೀ. ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ವಿಷಯ	: ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಮೀಸಲಿಟ್ಟಿರುವ ಅನುದಾನ ಕುರಿತು
ಉತ್ತರಿಸುವ ದಿನಾಂಕ	: 25.09.2020
ಉತ್ತರಿಸುವ ಸಚಿವರು	: ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಮೀಸಲಿಟ್ಟಿರುವ ಅನುದಾನ ಎಷ್ಟು, ವಿವರ ನೀಡುವುದು;	ಪ್ರಸಕ್ತ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ರೂ. 275.85 ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದೆ. ಲೆಕ್ಕಶೀರ್ಷಿಕೆವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ)	ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಪ್ರವಾಸಿ ತಾಣಗಳ ವಿವರ ನೀಡುವುದು;	2015-20ರ ಪ್ರವಾಸೋದ್ಯಮ ನೀತಿ ಅನ್ವಯ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ.
ಇ)	2020-21ನೇ ಸಾಲಿನಲ್ಲಿ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಪ್ರವಾಸಿತಾಣಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ವಿವರ ನೀಡುವುದು;	ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.20.00 ಕೋಟಿ ಅನುದಾನ ಒದಗಿಸಿದ್ದು, ಮುಂದುವರೆದ ಕಾಮಗಾರಿಗಳಿಗೆ ಈ ಅನುದಾನವನ್ನು ವಿನಿಯೋಗಿಸಬೇಕಾಗಿದೆ. ಅದರಂತೆ, ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಯ ಹೊಸ ಯೋಜನೆ / ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಈ)	ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ವಿವರ ನೀಡುವುದು?	ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1. 2018-19ನೇ ಸಾಲಿನಲ್ಲಿ ಜೋಗ್ ಪ್ರಾಧಿಕಾರದ ವ್ಯಾಪ್ತಿಯಲ್ಲಿ ರೈನ್ ಶೆಲ್ಟರ್ ನಿರ್ಮಾಣ ಕಾಮಗಾರಿಯನ್ನು ರೂ. 80.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ. 2. 2018-19ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಜೋಗ್ ಜಲಪಾತ ಪ್ರದೇಶದಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪನೆ (ಆರ್. ಓ.ಪ್ಲಾಂಟ್) ಹೈಟೆಕ್ ಶೌಚಾಲಯ, ಆಹಾರ ಮಳಿಗೆ ನಿರ್ಮಾಣ ಕಾಮಗಾರಿಯನ್ನು ರೂ. 230.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ ಮೂಲಕ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ. 3. 2018-19ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಜೋಗ್ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಎಡ ಮತ್ತು ಬಲಭಾಗಕ್ಕೆ ಇಂಟರ್ ಲಾಕ್ ಅಳವಡಿಸಿ ವಾಹನ ತಂಗುದಾಣಕ್ಕೆ ಅವಕಾಶ ಕಲ್ಪಿಸುವ ಕಾಮಗಾರಿ ರೂ. 157.93 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೆ.ಆರ್. ಐ.ಡಿ.ಎಲ್. ಸಂಸ್ಥೆ ಮೂಲಕ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ.

		4. 2018-19ನೆ ಸಾಲಿನಲ್ಲಿ ಜೋಗ್ ಫಾಲ್ಸ್ ಪ್ರವಾಸಿಗರಿಗೆ ಮಳೆಗಾಲದಲ್ಲಿ ಫಾಲ್ಸ್ ವೀಕ್ಷಣೆಗೆ ರೈನ್ ಶೆಲ್ಟರ್ ಸಿವಿಲ್ ಕಾಮಗಾರಿ ರೂ. 14.30 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ. 5. 2018-19ನೆ ಸಾಲಿನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ವಾಹನ ಪಾರ್ಕಿಂಗ್ ಕಾಮಗಾರಿಗೆ 2ನೇ ಹಂತದಲ್ಲಿ ರೂ. 119.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ. 6. 2019-20ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಜೋಗ್ ಜಲಪಾತಕ್ಕೆ ದೀಪಾಲಂಕಾರ, ಟೆಂಟ್ ಹೌಸ್, ಲ್ಯಾಂಡ್ ಸ್ಕೇಪಿಂಗ್, ಸಾಹಸ ಕ್ರೀಡೆ ಇತ್ಯಾದಿ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ರೂ. 1000.00 ಲಕ್ಷಗಳಲ್ಲಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ. 7. ಶಿವಮೊಗ್ಗ ಜಿಲ್ಲೆಯ ವಿಶ್ವವಿಖ್ಯಾತ ಜೋಗ ಜಲಪಾತವನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಪ್ರವಾಸಿಗರಿಗೆ ಅಗತ್ಯವಾಗಿರುವ ರೋಪ್ ವೇ, ಕೆಫೆಟೇರಿಯಾ, ಮಕ್ಕಳ ಉದ್ಯಾನವನ, ಆಂಪೀಥಿಯೇಟರ್, ವಾಹನ ನಿಲ್ದಾಣ, ಜಲಕ್ರೀಡೆ ಮತ್ತು ಉದ್ಯಾನವನ, ಮಳಿಗೆಗಳ ಸಮುಚ್ಚಯ, ವೀಕ್ಷಣಾ ಗೋಪುರ, ಗಜೀಬೋ, ಹೈಮಾಸ್ಕ್ ಲೈಟಿಂಗ್, ಸಂಪರ್ಕ ರಸ್ತೆಗಳು, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿ ಪ್ರವಾಸಿ ಸೌಲಭ್ಯಗಳ ಕಾಮಗಾರಿಗಳನ್ನು ರೂ.120.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೆ.ಟಿ.ಟಿ.ಪಿ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಿ, ಕರ್ನಾಟಕ ವಿದ್ಯುತ ನಿಗಮ ನಿಯಮಿತ, ಬೆಂಗಳೂರು ರವರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

ಸಂಖ್ಯೆ: ಟಿಒಆರ್ 189 ಟಿಡಿವಿ 2020.

(ಸಿ.ಟಿ. ರವಿ)

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 673 (695)ಕ್ಕೆ

ಅನುಬಂಧ-1

3452-5452-Tourism Budget Grant 2020-21 (Rs in Crores)			
Sl. No	3452-TOURISM	Budget 2020-21	Revised Budget 2020-21
1	**3452-01-101-0-04**-200-Maintenance Expenditure Development of Tourist Centres at Hampi, Belur, Vijayapura	7.04	5.04
2	**3452-80-001-0-01** -Salary & other expd	5.74	5.74
3	**3452-80-104-0-01** -Salary & other expd	2.22	2.22
	3452-80-104-0-01-051-General Expenses	72.00	72.00
	3452-80-104-0-01-059-Other Expenses	23.00	23.00
	3452-80-104-0-01-422-SCSP	3.00	3.00
	3452-80-104-0-01-423-TSP	2.00	2.00
4	**3452-80-104-0-04**-106 Subsidies	20.00	10.00
A	**3452-Revenue Total**	135.00	123.00
5	**5452-01-101-0-05**-132-Capital Outaly **KTVG**	100.00	100.00
6	**5452-01-800-0-10**-436-NABARD ROAD WORKS	27.85	27.85
7	**5452-01-800-0-14**-132-Capital Expenses	20.00	20.00
8	**5452-01-800-0-16**-059-Other Expenses Mysuru Haat	5.00	5.00
B	5452-Capital Total	152.85	152.85
	A + B = TOTAL	**287.85**	**275.85**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 673 (695)ಕ್ಕೆ

ಅನುಬಂಧ-2

ಕ್ರ ಸಂ	ಜಿಲ್ಲೆ ಹೆಸರು	ತಾಲ್ಲೂಕು ಹೆಸರು	ಗುರುತಿಸಿರುವ ಪ್ರವಾಸಿ ತಾಣಗಳು
1	ಶಿವಮೊಗ್ಗ	ಭದ್ರಾವತಿ	ಭದ್ರಾವತಿ, ಭದ್ರ ಅಣೆಕಟ್ಟು
		ಹೊಸನಗರ	ನಗರ, ಹುಮ್ಚಾ, ಕೊಡಚಾದ್ರಿ
		ಸಾಗರ	ಇಕ್ಕೇರಿ, ಜೋಗ್ ಜಲಪಾತ, ವರದಮೂಲ, ಕೆಳದಿ.
		ಶಿಕಾರಿಪುರ	ತೊಗರ್ಸಿ, ಉಡುತಡಿ, ಬಳ್ಳಿಗಾವಿ.
		ಶಿವಮೊಗ್ಗ	ತ್ಯಾವರೆಕೊಪ್ಪ ಸಿಂಹಧಾಮ, ಸಕ್ಕರೆಬೈಲು ಆನೆ ಶಿಬಿರ, ಗಾಜನೂರು ಅಣೆಕಟ್ಟು, ಕೂಡ್ಲಿ, ಗಾಜನೂರು.
		ಸೊರಬ	ಚಂದ್ರಗುತ್ತಿ, ಸೊರಬ, ಗುಡವಿ ಪಕ್ಷಿಧಾಮ.
		ತೀರ್ಥಹಳ್ಳಿ	ತೀರ್ಥಹಳ್ಳಿ, ಕುಪ್ಪಳ್ಳಿ ಕುವೆಂಪು ವಸ್ತುಸಂಗ್ರಹಾಲಯ, ಕವಲೇದುರ್ಗ, ಆಗುಂಬೆ, ಮಂಡಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚ ಮೃಗವಧೆ, ಅಂಬುತೀರ್ಥ
2	ದಾವಣಗೆರೆ	ಚೆನ್ನಗಿರಿ	ಶಾಂತಿಸಾಗರ
		ದಾವಣಗೆರೆ	ಕೊಂಡಜ್ಜಿ ಕೆರೆ
		ಹರಿಹರ	ಹರಿಹರ, ಹರಿಹರೇಶ್ವರ ದೇವಸ್ಥಾನ
		ಹೊನ್ನಾಳಿ	ಸಂತೆಬೆನ್ನೂರು ಪುಷ್ಕರಣಿ / ಉಚ್ಚಂಗಿ ದುರ್ಗ, ತೀರ್ಥಮೇಶ್ವರ,